# ತಹಶೀಲ್ದಾರರ ನ್ಯಾಯಾಲಯ ಹಗರಿಬೊಮ್ಮನಹಳ್ಳಿ

ನಂ/ಕಂ/ಪಹಣಿ/ವಿವಾದ/17/2015.16; ದಿನಾಂಕ: 28.07.2016

| ವಾದಿ | ಪ್ರತಿವಾದಿ |
| --- | --- |
| ಕೆ ಮೈಲಪ್ಪ ತಂದೆ ಕೆ ಸಣ್ಣಹನುಮಂತಪ್ಪ ಕೆಚ್ಚಿನಬಂಡಿ ಗ್ರಾಮ, ಹ.ಬೊ.ಹಳ್ಳಿ(ತಾ) | 1.ಕೆಲಸೇರು ಮಾರ್ಕಂಡಯ್ಯ ತಂದೆ ಸಣ್ಣಮೈಲಪ್ಪ ಕೆಚ್ಚಿನಬಂಡಿ ಗ್ರಾಮ<br>2.ಕೆ ನಾಗಮ್ಮ ತಂದೆ ಲೇಟ್ ಕೆಲಸೇರು ಸಣ್ಣಹನುಮಂತಪ್ಪ ಹೆಚ್ ವಿಠಲಾಪುರ ಗ್ರಾಮ, ಸಂಡೂರು (ತಾ)<br>3.ಕೆ ದುರುಗಮ್ಮ ಗಂಡ ರಾಮಚಂದ್ರಪ್ಪ, ನಿಂಗಾಪುರ ಗ್ರಾಮ ಕೊಪ್ಪಳ(ತಾ) |

ಉಪಸ್ಥಿತರು:**ಕೆ.ಬಿ.ಆನಂದಪ್ಪನಾಯಕ್,** ಕ.ಆ.ಸೇ

**ತಹಶೀಲ್ದಾರರು**

**ಹಗರಿಬೊಮ್ಮನಹಳ್ಳಿ**

ವಿಷಯ:-ಹಗರಿಬೊಮ್ಮನಹಳ್ಳಿ ತಾಲೂಕು ಕೆಚ್ಚಿನಬಂಡಿ ಗ್ರಾಮದ ಸರ್ವೆ ನಂ.115/5 ಪೈಕಿ ವಿ: 01.00 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.02750/2014.15; ದಿ:25.11.14ರ ಕ್ರಯ ಪ್ರಕಾರ ಹಕ್ಕುಬದಲಾವಣೆ ಮಾಡಲು ದಾಖಲಾದ ತಕರಾರು ಅರ್ಜಿ ವಿಚಾರಣೆ ಕುರಿತು.

*******

ಪೀಠಿಕೆ;

ಹಗರಿಬೊಮ್ಮನಹಳ್ಳಿ ತಾಲೂಕು ಕೆಚ್ಚಿನಬಂಡಿ ಗ್ರಾಮದ ಸರ್ವೆ ನಂ.115/5 ಪೈಕಿ ವಿ: 01.00 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.02750/2014.15; ದಿ:25.11.14ರ ಕ್ರಯ ಪತ್ರದ ಪ್ರಕಾರ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಕ್ರಮವಹಿಸಲಾಗಿ ನಿಗದಿತ ಅವಧಿಯೊಳಗೆ 02 ಮತ್ತು 03 ನೇ ಪ್ರತಿವಾದಿಗಳು ತಕರಾರು ಅರ್ಜಿಯನ್ನು ಸಲ್ಲಿಸಿರುವುದರಿಂದ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಹಕ್ಕು ಬದಲಾವಣೆ ಆದೇಶ ಸಂ/ಹೆಚ್-26/2014.15;ದಿ:03.01.15ರ ಪ್ರಕಾರ ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರು ಸಲ್ಲಿಸಿರುತ್ತಾರೆ.

ಕಂದಾಯ ನಿರೀಕ್ಷಕರು ಹ.ಬೊ.ಹಳ್ಳಿ ರವರ ಹಕ್ಕುಬದಲಾವಣೆ ಆದೇಶದನ್ವಯ ದಿನಾಂಕ:-07.01.16 ರಿಂದ ದಿ:-28.07.2016ರ ವರೆಗೆ ಕಾಲಾವಕಾಶ ನೀಡಿ ಕರ್ನಾಟಕ ಭೂ ಕಂದಾಯ ಕಾಯ್ದೆ-1964ರ ಕಲಂ129(4)ರನ್ವಯ ವಿಚಾರಣೆ ಮಾಡಲಾಯಿತು. ವಿಚಾರಣೆ ಸಮಯದಲ್ಲಿ 02&03ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಲಿಂಗನಗೌಡ್, ವಕೀಲರು ಹ.ಬೊ.ಹಳ್ಳಿ ಇವರು ವಕಾಲತ್ ಅರ್ಜಿ ಸಲ್ಲಿಸಿರುತ್ತಾರೆ.

ವಿಚಾರಣೆ ಸಮಯದಲ್ಲಿ ವಾದಿಯು, ವಿವಾದಿತ ಜಮೀನನ್ನು ಪಟ್ಟಾದಾರರಿಂದ ನೋಂದಾಯಿತ ಕ್ರಯ ದಸ್ತಾವೇಜು ಪ್ರಕಾರ ಕ್ರಯಕ್ಕೆ ಹೊಂದಿದ್ದು ಕ್ರಯ ಪತ್ರದ ಪ್ರಕಾರ ಹಕ್ಕುಬದಲಾವಣೆಗೆ ಆದೇಶಿಸುವಂತೆ ವಾದಿ ಮತ್ತು ವಿಕ್ರಯದಾರರಾದ 01ನೇ ಪ್ರತಿವಾದಿಯು ಕೋರುತ್ತಾ ಈ ಬಗ್ಗೆ ತಕರಾರು ಸಲ್ಲಿಸಿರುವ 02 ಮತ್ತು 03ನೇ ಪ್ರತಿವಾದಿಗಳ ತಕರಾರನ್ನು ತಳ್ಳಿಹಾಕುವಂತೆ ವಿನಂತಿಸಿರುತ್ತಾರೆ.

ಪ್ರತಿವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಿವಾದಿತ ಜಮೀನನ್ನು ಕ್ರಯಕ್ಕೆ ಹೊಂದಿರುವ ಕ್ರಯದಾರರ ತಂದೆಯ ಮೇಲೆ ಹೊಸಪೇಟೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿದ್ದು ವಾದಿಯ ಕೋರಿಕೆಯಂತೆ ಹಕ್ಕುಬದಲಾವಣೆ ಮಾಡಬಾರದೆಂದು ತಿಳಿಸಿರುತ್ತಾರೆ ಆದರೆ ಈ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲಾ. ಈ ಬಗ್ಗೆ ತಕರಾರುದಾರರನ್ನು ವಿಚಾರಣೆ ಮಾಡಲಾಗಿ ವಿವಾದಿತ ಜಮೀನಿನಲ್ಲಿ ಅಣ್ಣತಮ್ಮಂದಿರ ಆಸ್ತಿ ಬರಬೇಕಾಗಿದ್ದು ಅದಕ್ಕಾಗಿ ತಕರಾರು ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ, ಮತ್ತು 02 ಮತ್ತು 03ನೇ ಪ್ರತಿವಾದಿಗಳು ತಮ್ಮ ಲಿಖಿತ ಒಪ್ಪಿಗೆ ಪತ್ರವನ್ನು ಹಾಜರುಪಡಿಸುತ್ತಾ ವಿವಾಧಿತ ಜಮೀನಿನ ಪೈಕಿ ವಿ:01.71 ಎಕರೆ ಜಮೀನನ್ನು ಡಾ.ನಂ.2022/2015.16; ದಿ:31.08.2015ರ ಪ್ರಕಾರ ಶ್ರೀ ನಿರಂಜನ ವಿ.ಆರ್. ತಂದೆ ಲೇಟ್ ವಿರುಪಾಕ್ಷಯ್ಯ ಆರ್ ಇವರು ಕ್ರಯಹೊಂದಿರುವ ಜಮೀನು ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಆದರೆ ವಾದಿಯು ಕ್ರಯಕ್ಕೆ ಹೊಂದಿರುವ ವಿ:-01.00 ಎಕರೆ ಜಮೀನಿನ ಹಕ್ಕುಬದಲಾವಣೆಗೆ ಮಾತ್ರ ಆಕ್ಷೇಪಣೆ ಇರುತ್ತದೆ, ಸದರಿ ಜಮೀನಿನ ವಿವಾದದ ಕುರಿತು ಹೊಸಪೇಟೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂ/ಒ.ಎಸ್/ನಂ/42/2015ರಲ್ಲಿ ವಿವಾದಿತ ಜಮೀನಿನಲ್ಲಿನ ಪಾಲುವಿಭಾಗಕ್ಕಾಗಿ ದಾವೆ ದಾಖಲಿಸಿದ್ದು ಹಾಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದು ತಿಳಿಸಿರುತ್ತಾರೆ, ಆದರೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲಾ.

ವಾದಿಯ ಮೌಖಿಕ ಹೇಳಿಕೆ ಮತ್ತು ಪ್ರತಿವಾದಿ ಪರ ವಕೀಲರ ವಾದದನ್ವಯ ದಾಖಲೆಗಳನ್ನು ಪರಿಶೀಲಿಸಲಾಗಿ,

1.ವಿವಾದಿತ ಜಮೀನನ್ನು ವಾದಿಯು ಜಮೀನಿನ ಪಟ್ಟಾದಾರರಿಂದ ಡಾ.ನಂ.ಹೆಚ್.ಬಿ.ಹೆಚ್.1.02750/2014.15; ದಿ:25.11.14ರ ಕ್ರಯ ಪತ್ರದ ಪ್ರಕಾರ ಜಮೀನಿನ ಪಟ್ಟಾದಾರರಾದ 01ನೇ ಪ್ರತಿವಾದಿಯಿಂದ ಕ್ರಯಕ್ಕೆ ಪಡೆದಿರುತ್ತಾರೆ.

2.ಜಮೀನು ಕ್ರಯಕ್ಕೆ ನೀಡಿದ ವಿಕ್ರಯದಾರರು ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಎಂದು ತಿಳಿಸಿರುತ್ತಾರೆ.

3. 02 ಮತ್ತು 03ನೇ ಪ್ರತಿವಾದಿಗಳು ವಾದಿಯು ಕ್ರಯಕ್ಕೆ ಹೊಂದಿರುವ ವಿ:01.00 ಎಕರೆ ಜಮಿನಿನ ವಿವಾದದ ಕುರಿತು ಹೊಸಪೇಟೆ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಸಂ/ಒ.ಎಸ್/ನಂ/42/2015ರಲ್ಲಿ ದಾವೆ ದಾಖಲಿಸಿದ್ದು ಹಾಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದು ತಿಳಿಸಿರುತ್ತಾರೆ, ಆದರೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲಾ.

4.ವಿವಾಧಿತ ಜಮೀನಿನ ಪೈಕಿ ವಿ:01.71 ಎಕರೆಯನ್ನು ಮತ್ತೊಬ್ಬ ಕ್ರಯದಾರರಾದ ಶ್ರೀ ನಿರಂಜನ ವಿ.ಆರ್. ತಂದೆ ಲೇಟ್ ವಿರುಪಾಕ್ಷಯ್ಯ ಆರ್ ಇವರು ಡಾ.ನಂ.2022/2015.16; ದಿ:31.08.2015ರ ಪ್ರಕಾರ ಕ್ರಯಕ್ಕೆ ಹೊಂದಿರುವ ಜಮೀನನ್ನು ಹಕ್ಕುಬದಲಾವಣೆ ಮಾಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲಾ ಎಂದು 02 & 03ನೇ ಪ್ರತಿವಾದಿಗಳು ನೀಡಿರುವ ಲಿಖಿತ ವಾದದ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳಿಂದ ವಿವಾದಿತ ಜಮೀನನ್ನು ವಾದಿಯು ನೊಂದಾಯಿತ ಕ್ರಯ ದಸ್ತಾವೇಜು ಪ್ರಕಾರ ಕ್ರಯಕ್ಕೆ ಹೊಂದಿರುವ ಕ್ರಯ ವ್ಯವಹಾರವು ಕಾನೂನುಬದ್ಧವಾಗಿದ್ದು ಈ ಬಗ್ಗೆ ಸಿವಿಲ್

ನ್ಯಾಯಾಲಯದಲ್ಲಿ ದಾವೆ ದಾಖಲಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ತಕರಾರುದಾರರು ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇರುವುದರಿಂದ ತಕರಾರುದಾರರ ತಕರಾರನ್ನು ತಳ್ಳಿಹಾಕುತ್ತಾ ನೊಂದಾಯಿತ ಕ್ರಯ ದಸ್ತಾವೇಜು ಪ್ರಕಾರ ಹಕ್ಕುಬದಲಾವಣೆಗೆ ಆದೇಶಿಸುವುದು ಸಮಂಜಸವೆಂದು ಕಂಡುಬಂದಿರುವುದರಿಂದ ಈ ಕೆಳಗಿನಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಗಾಗಿ ಹಾಗೂ ವಾಸ್ತವಾಂಶಗಳ ಹಿನ್ನಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಕೆಚ್ಚಿನಬಂಡಿ ಗ್ರಾಮದ ಸರ್ವೆ ನಂ.115/5 ಪೈಕಿ ವಿ: 01.00 ಎಕರೆ ಜಮೀನನ್ನು ಡಾ.ನಂ.ಹೆಚ್.ಬಿ.ಹೆಚ್.1.02750/2014.15; ದಿ:25.11.14ರ ಕ್ರಯ ಪತ್ರದ ಪ್ರಕಾರ ಕ್ರಯದಾರರಾದ ವಾದಿಯ ಹೆಸರಿನಲ್ಲಿ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ತಿದ್ದಿ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

(ಕೆ.ಬಿ.ಆನಂದಪ್ಪನಾಯಕ್)
ತಹಶೀಲ್ದಾರರು
ಹಗರಿಬೊಮ್ಮನಹಳ್ಳಿ

ಗೆ,
ವಾದಿ/ಪ್ರತಿವಾದಿಗೆ

ಪ್ರತಿಯನ್ನು:

ಶಿರಸ್ತೇದಾರರು ಭೂಮಿ ಕೇಂದ್ರ ತಾಲೂಕು ಕಛೇರಿ ಹಗರಿಬೊಮ್ಮನಹಳ್ಳಿ ಇವರಿಗೆ ಅಗತ್ಯ ಕ್ರಮಕ್ಕಾಗಿ ನೀಡಿದೆ.

ಕಂದಾಯ ನಿರೀಕ್ಷಕರು ಹಗರಿಬೊಮ್ಮನಹಳ್ಳಿ ಇವರಿಗೆ ಮಾಹಿತಿಗಾಗಿ ನೀಡಿದೆ.